ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.**

ಸಂಖ್ಯೆ : ಸಿ1(5)ಪ್ರೌ.ಶಿ.ಸ್ಥಾ.ಪ.ಬಡ್ತಿ-06/2021-22 ದಿನಾಂಕ : 29-07-2022

## ಜ್ಞಾಪನ

ವಿಷಯ :- ಮೈಸೂರು / ಬೆಂಗಳೂರು ವಿಭಾಗದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-2 ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು / ತತ್ಸಮಾನ ಗ್ರೂಪ್-ಬಿ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು.

ಉಲ್ಲೇಖ :- 1) ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ : 14-07-2022

2) ಇಲಾಖಾ ಮುಂಬಡ್ತಿ ಸಭೆ ದಿನಾಂಕ : 25-07-2022 ಮತ್ತು 27-07-2022.

*********

ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ / ಬೆಂಗಳೂರು ವಿಭಾಗದ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು / ತತ್ಸಮಾನ ವೃಂದದ ಹುದ್ದೆಯಿಂದ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಗ್ರೂಪ್-ಬಿ ವೃಂದದ ಖಾಲಿ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ಉಲ್ಲೇಖ-2 ರ ಇಲಾಖಾ ಮುಂಬಡ್ತಿ ಸಭೆಯಲ್ಲಿ ಅನುಮೋದಿಸಲಾಗಿದೆ.

ಮೇಲ್ಕಂಡ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ಮುಂಬಡ್ತಿಗೆ ಅರ್ಹರೆಂದು ಪರಿಗಣಿಸಲಾದ ಸಹ ಶಿಕ್ಷಕರುಗಳಿಗೆ ಮೊದಲನೆಯ ಸುತ್ತಿನ ಕೌನ್ಸಿಲಿಂಗ್ ನ್ನು ದಿನಾಂಕ : 29-07-2022 ರಂದು ನಡೆಸಲಾಯಿತು. ಸದರಿ ಕೌನ್ಸಿಲಿಂಗ್ ನಂತರ ಉಳಿಕೆಯಾದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಉಪ ಪ್ರಾಂಶುಪಾಲರ ಖಾಲಿ ಹುದ್ದೆಗಳಿಗೆ ದಿನಾಂಕ : 30-07-2022 ರಂದು ಕೌನ್ಸಿಲಿಂಗ್ ನ್ನು ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 18 ಸೇನೌವ 2014 ದಿನಾಂಕ : 06-02-2014 ರಂತೆ ಅಂಗವಿಕಲ ನೌಕರರಿಗೆ ಆದ್ಯತೆ ನೀಡಬೇಕಾಗಿದ್ದು, ಕೌನ್ಸಿಲಿಂಗ್‌ಗೆ ಹಾಜರಾಗುವಾಗ ಅಂಗವಿಕಲ ಅಭ್ಯರ್ಥಿಗಳು ಅಧಿಕೃತ ಮೂಲ ಪ್ರಮಾಣ ಪತ್ರದೊಂದಿಗೆ ಆಯಾ ಉಪ ನಿರ್ದೇಶಕರ ಕಛೇರಿಯಲ್ಲಿ ಹಾಜರಾಗಲು ತಿಳಿಸಿದೆ.

ಆಯಾ ಉಪ ನಿರ್ದೇಶಕರು ಈ ಬಗ್ಗೆ ತಮ್ಮ ವ್ಯಾಪ್ತಿಯ ಶಿಕ್ಷಕರಿಗೆ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಸೂಚಿಸಸಲು ಹಾಗೂ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ. ಕೌನ್ಸಲಿಂಗ್ ಸಮಯದಲ್ಲಿ ಖುದ್ದು ಹಾಜರಿರತಕ್ಕದ್ದು. ಅಗತ್ಯವಿರುವ ತಾಂತ್ರಿಕ ಸಿಬ್ಬಂದಿ ಹಾಗೂ ನೆಟ್ ವ್ಯವಸ್ಥೆ ಸಹಿತ ಗಣಕಯಂತ್ರ ಇತ್ಯಾದಿ ಪರಿಕರಗಳೊಂದಿಗೆ ಸಿದ್ದರಿರತಕ್ಕದ್ದು.

ಜೂಮ್ ಲಿಂಕ್ ಅನ್ನು ಉಪ ನಿರ್ದೇಶಕರಿಗೆ (ಆಡಳಿತ) ರವರಿಗೆ ಕಳುಹಿಸಲಾಗುವುದು.

| ದಿನಾಂಕ | ವಿಭಾಗ | ವಿವರ |
|---|---|---|
| **30-07-2022** ಮಧ್ಯಾಹ್ನ **1.00** ಗಂಟೆಯಿಂದ | ಮೈಸೂರು ವಿಭಾಗ | ಜ್ಯೇಷ್ಠತಾ ಸಂಖ್ಯೆ **ಇತರೆ ವರ್ಗ:** 1618 ರಿಂದ 1700 ರವರೆಗೆ **ಪ.ಜಾತಿ :** 3189 ರಿಂದ 3224 ರವರೆಗೆ (ಲಗತ್ತಿಸಿರುವ ಪಟ್ಟಿಯಂತೆ) (ಅನುಬಂಧ-1) |
| | ಬೆಂಗಳೂರು ವಿಭಾಗ | ಜ್ಯೇಷ್ಠತಾ ಸಂಖ್ಯೆ: **ಇತರೆ ವರ್ಗ** : 719 ರಿಂದ 802 ರವರೆಗೆ **ಪ.ಜಾತಿ :** 1642 ರಿಂದ 1705 ರವರೆಗೆ **ಪ.ಪಂ:** 1633 (ಲಗ್ತಿಸಿರುವ ಪಟ್ಟಿಯಂತೆ) (ಅನುಬಂಧ-2) |

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

**(ಡಾ. ರೂಪಶ್ರೀ . ಎಸ್. ಕ.ಆ.ಸೇ)**
**ಜಂಟಿ ನಿರ್ದೇಶಕರು (ಆಡಳಿತ)**

ಇವರಿಗೆ :-

**1)** ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಅಗತ್ಯ ಕ್ರಮಕ್ಕಾಗಿ.

**2)** ಸಂಬಂಧಿಸಿದ ಶಿಕ್ಷಕರಿಗೆ (ಆಯಾ ಉಪ ನಿರ್ದೇಶಕರ ಮುಖಾಂತರ)

**ಪ್ರತಿ** :-

1) ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. ಇವರು ಸದರಿ ಕೌನ್ಸಿಲಿಂಗ್‌ಗೆ ಎಲ್ಲ ಅವಶ್ಯಕ ಸಿದ್ದತೆಗಳನ್ನು ಕೈಗೊಳ್ಳುವುದು ಮತ್ತು ಕೌನ್ಸಿಲಿಂಗ್ ಸಮಯದಲ್ಲಿ ಉಪಸ್ಥಿತರಿರಲು ಸೂಚಿಸಿದೆ.